(ಶ್ರೀ ಕೆ. ಯೆಂಕಟಪ್ಪ)

ದ್ದಾರೆ. ಕೆಲವರನ್ನು ಆಸ್ಪತ್ರೆಗೆ ಸೇರಿಸುವ ಪರಿಸ್ಥಿತಿ ಬಂದಿದೆ. ಅಂದ ಮೇಲೆ ನಾಳೆ ಅಥವಾ ನಾಡಿದ್ದು ಅದರ ಬಗ್ಗೆ ಹೇಳಿಕೆ ಕೊಡುತ್ತೇನೆಂದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು :—ಟೆಲಿಗ್ರಾಂ ಕಳುಹಿಸಿ ಅದನ್ನು ಕಾಲ್ ಅಟೆನ್‌ಷನ್ ನೋಟೀಸ್ ಆಗಿ (ಪರಿಗಣಿಸಿ) ಎಂಬುದಾಗಿ ಹೇಳಿದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಕೆ. ನಾಯ್ಕರ್ :—ಮಾನ್ಯ ಸದಸ್ಯರು ಹೇಳಿದಂಥ ವಿಚಾರವನ್ನು ಕೇಳಿಕೊಂಡು ಈಗಾಗಲೇ ಶಿವಮೊಗ್ಗ ಡೆಪ್ಯುಟಿ ಕಮಿಷನರ್ ಅವರನ್ನು ಫೋನಿನಲ್ಲಿ ಕಾಂಟ್ಯಾಕ್ಟ್ ಮಾಡಿದ್ದೇನೆ. ಅವರನ್ನು ಆ ಜಾಗಕ್ಕೆ ಹೋಗಿ ಎಲ್ಲ ಅಂಶಗಳನ್ನೂ ತಿಳಿದುಕೊಂಡು ನನಗೆ ತಕ್ಷಣ ತಿಳಿಸಿ ಎಂಬುದಾಗಿ ಅವರಿಗೆ ಹೇಳಿದ್ದೇನೆ.

NOTICES UNDER RULE 312

(i) *Hunger strike by Councillars of Shiralkappa*

ಶ್ರೀ ಯೆಂಕಟಪ್ಪ (ಶಿಕಾರಿಪುರ) :—ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಕಳೆದ ಶನಿವಾರ ಸಭೆಯನ್ನು ಮುಗಿಸಿಕೊಂಡು ಶಿರಾಳಕೊಪ್ಪಕ್ಕೆ ಹೋಗಿದ್ದೆ. ಆಲ್ಲಿನ ಪುರಸಭಾ ಅಧ್ಯಕ್ಷರಿಂದ ಅಲ್ಲಿನ ಕೌನ್‌ಸಿಲರುಗಳಿಗೆ ಕೊಡುತ್ತಿರುವ ಕಿರುಕುಳಕ್ಕಾಗಿ ಅಲ್ಲಿ ಅವರ ಸತ್ಯಾಗ್ರಹ ಹೂಡಿದ್ದು ಈಗ ಅವರಲ್ಲಿ ಒಬ್ಬ ಕೌನ್‌ಸಿಲರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ಕೂಡಲೆ ಕಾರ್ಯಕ್ರಮ ಕೈಗೊಳ್ಳದಿದ್ದರೆ, ನಾಳೆ ಅವರು ಸತ್ತರೇನು ಮಾಡುವುದು ?

ಶ್ರೀ ಡಿ. ಕೆ. ನಾಯ್ಕರ್ :—. ನಾನು ಈಗಾಗಲೇ ಶಿವಮೊಗ್ಗ ಡೆಪ್ಯುಟಿ ಕಮಿಷನರಿಗೆ ಕೂಡಲೆ ಸ್ಥಳಕ್ಕೆ ಹೋಗಿ ಅಲ್ಲಿಯ ನಿಜಾಂಶದ ಬಗ್ಗೆ ವರದಿಮಾಡಬೇಕೆಂದು ಹೇಳಿದ್ದೇನೆ. ಅವರು ಸಾಧ್ಯವಾದದ್ದನ್ನೆಲ್ಲಾ ಆ ಸತ್ಯಾಗ್ರಹ ನಿಲ್ಲಿಸುವುದಕ್ಕೆ ಮಾಡೇಮಾಡುತ್ತಾರೆ. ಅವರಿಂದ ನನಗೆ ಉತ್ತರ ಬಂದಕೂಡಲೇ ಇಲ್ಲಿ ನಾನು ಈ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆ,

ಶ್ರೀ ಎಸ್. ಬಂಗಾರಪ್ಪ :....ನಾಳೆಯೇ ಒಂದು ಹೇಳಿಕೆಯನ್ನು ಹೇಳುವುದಾಗಿ ಹೇಳಿ ಆಗ ನಮಗೆ ಸ್ವಲ್ಪ ಸಮಾಧಾನವಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್ :— ನಾನು ಆಗಲೇ ಹೇಳಿದಂತೆ ಡೆಪ್ಯೂಟಿ ಕಮೀಷನರ್ ಅವರಿಗೆ ಫೋನ್ ಮೂಲಕ ತಿಳಿಸಿದ್ದೇನೆ. ಅವರು ಕೂಡಲೆ ಸ್ಥಳಕ್ಕೆ

ಹೋಗುತ್ತಾರೆ. ಅವರು ಅಲ್ಲಿ ಏನು ಗೊಂದಲವುಂಟಾಗಿದೆ ಎಂಬುದನ್ನು ವಿಚಾರ ಮಾಡುತ್ತಾರೆ. ಅವರ ವರದಿ ಬಂದ ತಕ್ಷಣ ಸಾಧ್ಯವಾದ ಮಟ್ಟಿಗೂ ನಾಳೆ ಒಂದು ಹೇಳಿಕೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅವರಿಂದ ವಿಚಾರ ತಿಳಿಯದೆ ನಾನು ಇಲ್ಲಿ ಸಭೆಗೆ ಏನು ತಿಳಿಸಲಿ ?

ಅಧ್ಯಕ್ಷರು : ತಿವಮೊಗ್ಗದಿಂದ ಉತ್ತರ ಬಂದ ಕೂಡಲೆ ಆ ರೀತಿ ಮಾಡಿ

(ii) A Minister involved in a murder case

ಶ್ರೀ ಎಂ. ಎಸ್. ಕೃಷ್ಣನ್ :—ಮಾನ್ಯ ಅಧ್ಯಕ್ಷರೇ, ನಾನು ರೂಲ್ 312ರ ಕೆಳಗೆ ಎಂದು ನೋಟೀಸನ್ನು ಕೊಟ್ಟಿದ್ದೆ. ಒಂದು ಮರ್ಡರ್ ಕೇಸಿನಲ್ಲಿ ಇಲ್ಲಿಯ ಒಬ್ಬ ಮಂತ್ರಿಗಳು ಇನ್‌ವಾಲ್ವ್ ಆಗಿದ್ದಾರೆ.

ಅಧ್ಯಕ್ಷರು:—ನಾನು ಅದನ್ನು ಪರಿಶೀಲನೆ ಮಾಡಿದೆ. ಅದು ಸಬ್‌ಜುಡೀಸ್ ಆಗುತ್ತದೆ ಆದರೆ ಸಭೆಯಲ್ಲಿ ಮುಖ್ಯ ಮಂತ್ರಿಗಳಿದ್ದಾಗ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಬಹುದು. ಅವರು ತಮಗೆ ಉತ್ತರ ಕೊಡುತ್ತಾರೆ.

(iii) Tenders for cutting forests in Sorab Taluk

ಶ್ರೀ ಎಸ್. ಬಂಗಾರಪ್ಪ :—ಮಾನ್ಯ ಅಧ್ಯಕ್ಷರೇ, ರೂಲ್ 312ರ ಕೆಳಗೆ ನಾನೂ ಮತ್ತು ಶ್ರೀಗಳಾದ ಲಿಂಗಪ್ಪನವರು ಮತ್ತು ತಿಮ್ಮಪ್ಪನವರೂ ರುಜು ಮಾಡಿ ಒಂದು ನೋಟೀಸನ್ನು ತಮ್ಮ ಕಡೆಗೆ ಇಲ್ಲಿಗೆ 4 ದಿನಗಳ ಕೆಳಗೆ ಸೊರಬಾ ತಾವ್ಲೂಕಿನಲ್ಲಿ ಕೂಡಕಳ್ಳಿ ಮತ್ತು ತೆಕ್ಕೂರು ಗ್ರಾಮಗಳ ಹತ್ತಿರ ಇರತಕ್ಕ ಅರಣ್ಯ ವನ್ನು ಕಡಿಯುವುದಕ್ಕಾಗಿ ಸರ್ಕಾರದವರು ಟೆಂಡರನ್ನು ಕರೆದಿದ್ದಾರೆ. ಅದನ್ನು ತಡೆಗಟ್ಟ ತಕ್ಕ ವಿಚಾರದಲ್ಲಿ. . .

ಅಧ್ಯಕ್ಷರು :—ಅದನ್ನು ಸಾಧ್ಯವಾದರೆ ನೋಡಿ ನಾಳೆಯೇ ಅಜೆಂಡಾದಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Fasting by the Councillors in Shikaripur

ಶ್ರೀ ಕೆ. ಯಂಕಟಪ್ಪ.—ಮಾನ್ಯ ಅಧ್ಯಕ್ಷರೇ ಆ ಶಿರಾಳಕೊಪ್ಪದಲ್ಲಿ ಪುರಸಭಾ ಧ್ಯಕ್ಷರ ದೌರ್ಜನ್ಯ ಜಾಸ್ತಿಯಾಗಿ ಅಲ್ಲಿನ ಕೌನ್ಸಿಲರುಗಳು ಉಪವಾಸ ಸತ್ಯಾಗ್ರಹ ಮಾಡಿರುವುದನ್ನು ತಡೆಗಟ್ಟ ತಕ್ಕ ಬಗ್ಗೆ ಸರಕಾರದವರಿಂದ ನನಗೆ ಕೂಡಲೆ ಒಂದು ಭರವಸೆಯನ್ನು ಕೊಡಿಸಬೇಕು. ಅವರಲ್ಲಿ ಒಬ್ಬರು ಆಗಲೇ ಆಸ್ಪತ್ರೆಯಲ್ಲಿ ಸೇರಿದ್ದಾರೆ.....